ಅ) ರಾಜ್ಯದಲ್ಲಿ 5,37,724 ಜನರು ವಿಧವಾ ವೇತನವನ್ನು ಮತ್ತು 4,78,589 ಜನರು ವೃದ್ಧಾಪ್ಯವೇತನವನ್ನು ಪಡೆಯುತ್ತಿದ್ದಾರೆ.

ಆ) ರೂ. 538.13 ಲಕ್ಷ ರೂಗಳನ್ನು ವಿಧವಾ ವೇತನಕ್ಕಾಗಿ ಮತ್ತು 478.95 ಲಕ್ಷ ರೂಗಳನ್ನು ವೃದ್ಧಾಪ್ಯ ವೇತನಕ್ಕಾಗಿ ಮಾಸಿಕವಾಗಿ ಪೆಚ್ಚ ಮಾಡಲಾಗುತ್ತಿದೆ.

ಇ) ಇಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಸಾಂಬಾರು ಬೆಳೆ ಅಭಿವೃದ್ಧಿ ಯೋಜನೆ

1121 (1436) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಸಾಂಬಾರು ಬೆಳೆ ಅಭಿವೃದ್ಧಿ ಯೋಜನೆಗೆ 1999-2000ನೇ ಸಾಲಿಗೆ ನಿಗಧಿಪಡಿಸಿದ ಹಣ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

2) ಇದರಲ್ಲಿ ರೈತರಿಗೆ ಬೀಜದ ಕುಂಡಿ ಮತ್ತು ಅರಶಿನ ವಿತರಣೆಗೆ ಎಷ್ಟು ಹಣ ನಿಗದಿ ಪಡಿಸಲಾಗಿದೆ.

3) ಈ ಯೋಜನೆಯಲ್ಲಿ ಬೀಜದ ಕುಂಡಿ ಮತ್ತು ಅರಶಿನ ಯಾವ ಧಾರಣೆಗೆ ಕೊಳ್ಳಲಾಗಿದೆ. ಯಾವ ಸಂಸ್ಥೆಯಿಂದ ಕೊಳ್ಳಲಾಗಿದೆ. ಇದನ್ನು ಖಂಬಾಜು ಮಾಡಲು ಸಾರ್ವಜನಿಕ ಪ್ರಕಟಣೆ ನೀಡಲಾಗಿದೆಯೇ?

ಶ್ರೀ ಅಲ್ಲಂ ವೀರಭದ್ರಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

1) ರೂ. 361.35 ಲಕ್ಷ ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ.

2) ವಿವರಗಳನ್ನು ಅನುಬಂಧ-2ರಲ್ಲಿ ಒದಗಿಸಿದೆ.

3) ಪ್ರಸ್ತುತ ಧಾರಣೆ :- 1) ಕುಂಡಿ ರೂ. 44-00 2) ಅರಶಿನ ರೂ. 25-00 (ಪ್ರತಿ ಕೆ.ಜಿ. 1ಕ್ಕೆ) (ಪ್ಯಾಕಿಂಗ್ ಮತ್ತು ಸಾಗಾಣಿಕೆ ವೆಚ್ಚ ಒಳಗೊಂಡಂತೆ)

ಆ) ತೋಟಗಾರಿಕೆ ಸಂಶೋಧನಾ ಕೇಂದ್ರ, ಪೊಟ್ಟಂಗಿ (ಒರಿಸ್ಸಾ ರಾಜ್ಯ) ಹಾಗೂ ಕ್ಯಾಲಿಕೆಟ್ ಇತ್ಯಾದಿ ಸಂಸ್ಥೆ ಭಾರತೀಯ ಕೃಷಿ ಸಂಶೋಧನ ಪರಿಷತ್ ಭಾರತ ಸರ್ಕಾರ.

ಆ) ಕೇಂದ್ರ ಸರ್ಕಾರದ ಮಾರ್ಗಸೂಚಿಗಳಂತೆ ಕೇಂದ್ರ ಸರ್ಕಾರದ ನಿಗಧಿತ ಮೂಲಗಳಿಂದ ಹಾಗೂ ದರದಂತೆ ಪಡೆದಿರುವುದರಿಂದ ಸಾರ್ವಜನಿಕ ಪ್ರಕಟಣೆ ಅಗತ್ಯವಿರುವುದಿಲ್ಲ.

ಅನುಬಂಧ - 1

ಸಾಂಬಾರು ಬೆಳೆ ಸಾಮಗ್ರಿ ಅಭಿವೃದ್ಧಿ ಯೋಜನೆ 1999-2000

ಜಿಲ್ಲಾವಾರು : ವಿಭಾಗವಾರು ಆಯವ್ಯಯ

(ವಾರ್ಷಿಕ ಗುರಿ)

	ವಿಭಾಗ / ಜಿಲ್ಲೆ	ಆಯವ್ಯಯ ರೂ. ಲಕ್ಷಗಳಲ್ಲಿ	ವಿಭಾಗೀಯ ಮೊತ್ತ
1.	**ಬೆಂಗಳೂರು ವಿಭಾಗ :**		
	1) ಬೆಂಗಳೂರು (ಗ್ರಾಮಾಂತರ)	11.725	
	2) ಬೆಂಗಳೂರು (ನಗರ)	7.825	
	3) ಕೋಲಾರ	11.725	
	4) ತುಮಕೂರು	5.05	
	5) ಚಿತ್ರದುರ್ಗ	5.45	
	6) ಶಿವಮೊಗ್ಗ	36.2135	77.9885
2.	**ಮೈಸೂರು ವಿಭಾಗ :**		
	1) ಮೈಸೂರು	18.5375	
	2) ಮಂಡ್ಯ	5.64575	
	3) ಹಾಸನ	24.254	
	4) ಚಿಕ್ಕಮಗಳೂರು	29.995	
	5) ಕೊಡಗು	49.399	
	6) ದಕ್ಷಿಣ ಕನ್ನಡ	25.5225	153.3587
3.	**ಬೆಳಗಾಂವ್ ವಿಭಾಗ :**		
	1) ಬೆಳಗಾವಿ	13.60	
	2) ಬಿಜಾಪುರ	4.90	
	3) ಧಾರವಾಡ	63.60	
	4) ಉತ್ತರ ಕನ್ನಡ	10.622	92.7225
4.	**ಗುಲ್ಬರ್ಗಾ ವಿಭಾಗ :**		
	1) ಗುಲ್ಬರ್ಗಾ	1.775	
	2) ಬೀದರ್	5.50	
	3) ಬಳ್ಳಾರಿ	5.00	
	4) ರಾಯಚೂರು	13.50	25.775
5.	**ಸಾದಿಲ್ವಾರು ಘಟಕ :**	11.50	
	ಒಟ್ಟು	**361.35**	

ಅನುಬಂಧ - 2

ಕ್ರಮ ಸಂಖ್ಯೆ	ಗಿಡ /ಸಾಮಗ್ರಿ ಇತ್ಯಾದಿ ವಿವರ	ಕಡಿಮೆ ಬೆಲೆಯ ಕುಂಠಿತ ಪ್ರಾತ್ಯಕ್ಷಿಕೆ (ಬೀಜೋತ್ಪಾದನೆ) (0.1 ಹೆ.)ರೂ. ಗಳಲ್ಲಿ	ಹೆಚ್ಚಿನ ಬೆಲೆಯ ಅರಶಿನ ಪ್ರಾತ್ಯಕ್ಷಿಕೆ (ಬೀಜೋತ್ಪಾದನೆ) (0.1ಹೆ.)ರೂ. ಗಳಲ್ಲಿ
1.	ಬೀಜ / ಗೀಡಗಳು : 160 ಕೆ.ಜಿ.	1000-00	800-00
2.	ತಿಪ್ಪೆಗೊಬ್ಬರ /ಸಾವಯವ ಗೊಬ್ಬರ	800-00	700-00
3.	ರಸಗೊಬ್ಬರ	300-00	95-00
4.	ಸಸ್ಯ ಸಂರಕ್ಷಣೆ ಔಷಧಿ	300-00	55-00
	ಒಟ್ಟು	2400-00	1650-00
∴ ಶೇ. 50ರ ಬೆಲ್ಚದ ಹಣ ಪ್ರತಿ ಪ್ರಾತ್ಯಕ್ಷಿಕೆಗೆ		1200-00	825-00

ವಿಷಯ: ∴ ಶೇಕಡ 40- 50 ರಷ್ಟು ಫಟಕದ ಬೆಚ್ಚದ ಹಣ ಬೀಜದ ಬೆಳ್ಚವಾಗಿರುತ್ತದೆ. ಇಲಾಖೆಯಡಿ ಕೇಂದ್ರ ಸರ್ಕಾರವು ನಿಗದಿಪಡಿಸಿದಿ ಮೂಲಗಳಿಂದ (ಸಂಶೋಧನಾ ಕೇಂದ್ರ, ಮೊಟ್ಟಂಗಿ ಹಾಗೂ ಕೇರಳ) ಅಧುನಿಕ, ಅಧಿಕ ಇಳುವರಿ ಕೊಡುವ, ಕೃಷಿ ಸಂಶೋಧನೆ - ವಿಶ್ವವಿದ್ಯಾನಿಲಯ ಶಿಫಾರಸ್ಸು ಮಾಡಿರುವ ಈ ಕೆಳಕಂಡ

1) ಕುಂಠಿ :- ಸುಪ್ರಭ, ಸುರಭಿ, ಸರವಿ, ರಂಗ, ರಶ್ಮಿ ತಳಿಗಳು.
2) ಅರಶಿನ :- ರೋಮ, ಸುರೋಯ, ರಂಗ, ರಶ್ಮಿ ತಳಿಗಳು.

ಈ ತಳಿಗಳನ್ನು "ಸಹಕಾರಿ ಸಂಸ್ಥೆ - ಹಾಪ್‌ಕಾಮ್ಸ್, ಬಿ.ಎನ್.ಪಿ.ಎಸ್.ಗಳ ಮುಖಾಂತರ" ಸರಬರಾಜು ಮಾಡಲಾಗಿರುತ್ತದೆ.

ಬಿತ್ತನೆಗೆ ಯೋಗ್ಯವಲ್ಲದ ಜಮೀನಿನ ಕುರಿತು

1122 (1488) ಶ್ರೀ ಅಪ್ಪಾಜಿ.ಎನ್. ನಾಡಗೌಡ್ರ (ಮುದ್ದೇಬಿಹಾಳ) : ಮಾನ್ಯ ಕೃಷಿಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮುದ್ದೇಬಿಹಾಳ ಪಟ್ಟಣದಲ್ಲಿ ಮಧ್ಯ ಇರತಕ್ಕ ಸುಮಾರು 40 ಎಕರೆ ಜಮೀನಿನಲ್ಲಿ 14 ಎಕರೆ ಬಿತ್ತನೆ ಯೋಗ್ಯವಲ್ಲವಾಗಿರುವುದು ಇಲಾಖೆಯ ಗಮನಕ್ಕೆ ಬಂದಿದೆಯೇ?

2) ಬಂಜರು ಭೂಮಿಯನ್ನು ಸರ್ಕಾರದ ಬೇರೆ ಯೋಜನೆಗಳ ಉಪಯೋಗಕ್ಕಾಗಿ (ಅಂದರೆ ಪಿ.ಡಬ್ಲ್ಯೂ.ಡಿ) ಹಸ್ತಾಂತರ ಮಾಡುವ ಬಗ್ಗೆ ಸರ್ಕಾರವು ಯೋಚಿಸಿದೆಯೇ?

3) ಮೂಡಲೇ ಕ್ರಮ ಕೈಗೊಂಡು ಸವಿಸ್ತಾರವಾಗಿ ಉತ್ತರ ನೀಡುವುದು.